(ಇಂದು ದಿನಾಂಕಃ 19–07–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ -

1) ಅರ್ಜಿದಾರರ ಶಿಕ್ಷಣ 12 ನೇ ತರಗತಿವರೆಗೆ ಆಗಿರಬಹುದು. ಎದುರುದಾರನ ಶಿಕ್ಷಣದ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸಾಮಾನ್ಯವಾಗಿ ವಿವಾಹದ ಪೂರ್ವದಲ್ಲಿ ಹುಡಗಿ ಹಾಗೂ ಹುಡುಗನ ಮನೆಯವರು ಕೂಡಿ ಯಾರು ಏನು ವರೋಪಚಾರ ಯಾವ ರೀತಿಯಲ್ಲಿ ಮಾಡಬೇಕು ಎಂದು ಮಾತುಕತೆ ಮತ್ತು ಓಪ್ಪಿಕೆ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನಾನು ಅರ್ಜಿದಾರಳ ಹಾಗೂ ಎದುರುದಾರನ ವಿವಾಹ ಪೂರ್ವ ಮಾತುಕತೆಯಲ್ಲಿ ಉಪಸ್ಥಿತನಿದ್ದೆ. ಮಾತುಕತೆಯು ಎದುರುದಾರನ ಮನೆಯಲ್ಲಿ ಆಗಿರುತ್ತದೆ. ಮಾತುಕೆತೆಯಲ್ಲಿ ನಾನು, ವೀರಯ್ಯ ಪೂಜಾರ ಹಾಗೂ ಇನ್ನಿಬ್ಬರು ಇದ್ದರು.

2) ಸಾಮಾನ್ಯವಾಗಿ ಸದರಿ ಮೇಲೆ ಹೇಳಿದ ಮಾತುಕತೆಯ ಯಾದಿ ಮಾಡಲಾಗುತ್ತದೆ ಎಂದರೆ ಸರಿ. ಅರ್ಜಿದಾರಳ ಹಾಗೂ ಎದುರುದಾರನ ವಿವಾಹ ಪೂರ್ವದ ಮಾತುಕತೆಯ ಯಾದಿ ಮಾಡಿಲ್ಲ. ಸಾಮಾನ್ಯವಾಗಿ ಹೆಣ್ಣಿನ ಕಡೆಯವರು ವಿವಾಹ ಕಾಲಕ್ಕೆ ಬಾಂಡೆ ಸಾಮಾನಗಳನ್ನು ನೀಡುವ ಪದ್ದತಿ ಇರುತ್ತದೆ ಎಂದರೆ ಸರಿ. ಅರ್ಜಿದಾರಳ ಹಾಗೂ ಎದುರುದಾರನ ವಿವಾಹ ಸಮಯದಲ್ಲಿ ಅರ್ಜಿದಾರರ ತಂದೆಯವರು ಬಾಂಡೆ ಸಾಮಾನುಗಳನ್ನು ಖರೀದಿ ಮಾಡಿರುತ್ತಾರೆ. ಖರೀದಿ ಮಾಡಿದ ಅಂಗಡಿಯವರು ಖರೀದಿ ರಶೀದಿಯನ್ನು ನೀಡುತ್ತಾರೆ ಎಂದರೆ ಸರಿ. ಸದರಿ ಖರೀದಿ ಸಮಯದಲ್ಲಿ ನಾನು ಇರಲಿಲ್ಲ.

3) ಅರ್ಜಿದಾರಳ ತಂದೆಯವರು 5 ತೊಲೆ ಬಂಗಾರವನ್ನು ಸೌದತ್ತಿಯ ಸುಳ್ಳದವರ ಬಂಗಾರದ ಅಂಗಡಿಯಿಂದ ತೆಗೆದುಕೊಂಡು ಬಂದಿರುತ್ತಾರೆ ನಾನು ಸಹ ಹೋಗಿರುತ್ತೇನೆ. ಆ ಸಮಯದಲ್ಲಿ 10 ಗ್ರಾಂ ಬಂಗಾರದ ಬೆಲೆಯು 50 ಸಾವಿರ ರೂಪಾಯಿ ಇರಬಹುದು. ಅಂದು ಸುಮಾರು 5 ತೊಲೆ ಬಂಗಾರ ಅದರಲ್ಲಿ ತಾಳಿ ಹಾಗೂ ಚೈನು ಖರೀದಿ ಆಗಿರುತ್ತದೆ. ಸಾಮಾನ್ಯವಾಗಿ ಬಂಗಾರ ಖರೀದಿ ರಶೀದಿ ನೀಡುತ್ತಾರೆ ಎಂದರೆ ಸರಿ. ನಾವು ರಶೀದಿ ಪಡೆದುಕೊಂಡಿರುತ್ತೇವೆ. ರಶೀದಿಯಲ್ಲಿ ಎರಡೂವರೆ ಲಕ್ಷ ರೂಪಾಯಿ ಅಂತಾ ನಮೂದು ಮಾಡಿರುತ್ತಾರೆ.

4) ಅರ್ಜಿದಾರಳು ವಿವಾಹದ ನಂತರ ತನ್ನ ತವರೂ ಮನೆಯಲ್ಲಿ ವಾಸ ಮಾಡಿ ಈಗ 4 ವರ್ಷ ಕಳೆದಿರಬಹುದು. ಅರ್ಜಿದಾರಳು ತವರೂ ಮನೆಗೆ ಬರುವ ಪೂರ್ವದಲ್ಲಿ ನಾನು ಅವರ ಹಿರೆತನ ಮಾಡಿರುತ್ತೇನೆ. ಎದುರುದಾರನ ಅರ್ಜಿದಾರಳ ಹೇಳಿಕೆಯ ಮೇರೆಗೆ ಸ್ವಾಮಿ ಎನ್ನುವ ಮನೆಯಲ್ಲಿ

ಅರ್ಜಿದಾರರನ್ನು ಬಾಡಿಗೆ ನಾತೆಯಿಂದ ಕರೆದುಕೊಂಡು ಹೋಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಎದುರುದಾರನ ಮನೆಗೆ ಹೋಗಿರುತ್ತೇನೆ.

5) ಅರ್ಜಿದಾರಳ ತಂದೆಯ ತಾಯಿಗೆ ಅನಾರೋಗ್ಯವಿತ್ತು ಅಂದರೆ ಸರಿಯಲ್ಲ. ಅರ್ಜಿದಾರಳು ಎದುರುದಾರನ ಸಂಗಡ ಸ್ವಾಮಿ ಎನ್ನುವವರ ಮನೆಯಲ್ಲಿ ಕೇವಲ 8 ದಿನಗಳ ಕಾಲ ವಾಸ ಮಾಡಿ ತನ್ನ ಅಜ್ಜಿಗೆ ಅನಾರೋಗ್ಯವಿರುತ್ತದೆ ಎಂದು ಹೇಳಿ ದಿನಾಂಕ 27-11-2019 ರಂದು ತನ್ನ ತವರೂ ಮನೆಗೆ ಹೋಗಿರುತ್ತಾರೆ ಅಂದರೆ ಸರಿಯಲ್ಲ. ಅರ್ಜಿದಾರಳು ಅಂದಿನಿಂದ ಇಲ್ಲಿಯವರೆಗೆ ಎದುರುದಾರನ ಸಂಗಡ ಜೀವನ ಸಾಗಿಸಲು ಆತನ ಸಂಗಡ ಹೋಗಿರುವುದಿಲ್ಲ ಅಂದರೆ ಸರಿಯಲ್ಲ. 27-11-2019 ರ ನಂತರದಲ್ಲಿ ಅರ್ಜಿದಾರಳು ಮತ್ತು ಎದುರುದಾರರು ಇಬ್ಬರು ಬಂದು ನೋಡಿ ಪುನಃ ಜೀವನ ಸಾಗಿಸಲು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

6) ಅರ್ಜಿದಾರಳು ಎದುರುದಾರನ ವಿರುದ್ಧ ಯಾವುದೇ ದೂರನ್ನು ನೀಡಿಲ್ಲ. ಎದುರುದಾರನು ಅರ್ಜಿದಾರಳಿಗೆ ಉಪವಾಸ ಇಡುತ್ತಿದ್ದ ಬಗ್ಗೆ ನಾನು ಎದುರುದಾರನ ಮನೆಗೆ ಹಿರೆತನ ಮಾಡಲು ಹೋದಾಗ ಅರ್ಜಿದಾರಳು ಹೇಳಿರುತ್ತಾಳೆ. ಆಗ ನಾವು ಯಾವುದೇ ದೂರನ್ನು ನೀಡಿರುವುದಿಲ್ಲ. ಎದುರುದಾರನು ಮದ್ಯ ಸೇವನೆ ಮಾಡುವ ಬಗ್ಗೆ ಅರ್ಜಿದಾರಳು ಹಿರೆತನದ ಸಮಯದಲ್ಲಿ ಹೇಳಿರುತ್ತಾರೆ ನಾನು ಪ್ರತ್ಯಕ್ಷ ಕಂಡಿಲ್ಲ.

7) ಅರ್ಜಿದಾರಳ ಮತ್ತು ಎದುರುದಾರನ ನಡುವೆ ಮಾನ್ಯ ವಿಜಯಪುರ ನ್ಯಾಯಾಲಯದಲ್ಲಿ ಎಂ ಸಿ ಪ್ರಕರಣ ಸಂಖ್ಯೆ 125/2020 ದಾಖಲಾದ ಬಗ್ಗೆ ನನಗೆ ಗೊತ್ತಿದೆ. ಸದರಿ ಪ್ರಕರಣದಲ್ಲಿ ಅರ್ಜಿದಾರಳು ಎದುರುದಾರನ ಸಂಗಡ ಜೀವನ ಸಾಗಿಸಬೇಕೆಂದು ದಿಃ08-12-2022 ರಂದು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ನಂತರದಲ್ಲಿ ಅರ್ಜಿದಾರಳು ಜೀವನ ಸಾಗಿಸಲು ಹೋಗಿಲ್ಲ ಅಂದರೆ ಸರಿಯಲ್ಲ. ಆದೇಶವಾದ ಒಂದು ವಾರದಲ್ಲಿ ಅರ್ಜಿದಾರಳು ಹೋಗಿರುತ್ತಾರೆ. ಆದೇಶವಾದ ನಂತರ ಅರ್ಜಿದಾರಳು ಎದುರುದಾರನ ಸಂಗಡ ಜೀವನ ಸಾಗಿಸಲು ಹೋದ ಸಮಯದಲ್ಲಿ ಆಕೆಯು ಗರ್ಭಧರಿಸಿಲ್ಲ. ಆದೇಶದ ನಂತರ ಅರ್ಜಿದಾರಳು ಎದುರುದಾರನ ಸಂಗಡ ಹೋಗಿದ್ದು ಒಂದು ವಾರದಲ್ಲಿ ಜಗಳ ಉಂಟಾಗಿರುತ್ತದೆ. ಆದೇಶವಾದ ನಂತರ ಅರ್ಜಿದಾರಳು ಎದುರುದಾರನ ಸಂಗಡ ಹೋಗಿರುತ್ತಾಳೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

8) ನನಗೆ ಹಾಗೂ ಅರ್ಜಿದಾರಳ ತಂದೆಗೆ ಆತ್ಮಿಯತೆ ಇರುತ್ತದೆ ಎಂದರೆ ಸರಿ. ನಮ್ಮ ಮನೆ ಒಂದೇ ಓಣಿಯಲ್ಲಿ ಇದೆ ಎಂದರೆ ಸರಿ. ನಮಗೆ ತೊಂದರೆ ಉಂಟಾದಾಗ ಪರಸ್ಪರವಾಗಿ ಸಹಾಯ ಮಾಡುತ್ತೇವೆ ಎಂದರೆ ಸರಿ.

9) ವಿವಾಹದ ನಂತರದಲ್ಲಿ ಅರ್ಜಿದಾರಳು ವಿನಾಕಾರಣ ಎದುರುದಾರನ ಸಂಗಡ ಜಗಳ ಮಾಡಿ ತವರೂ ಮನೆಗೆ ಬರುತ್ತಿದ್ದಳು ಅಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ಎದುರುದಾರನು ಹಾಗೂ ಆತನ ಊರಿನ ಹಿರಿಯರು ಅರ್ಜಿದಾರಳ ಮನೆಗೆ ಬಂದು ಬುದ್ದಿ ಮಾತನ್ನು ಹೇಳಿರುತ್ತಾರೆ ಅಂದರೆ ಸರಿಯಲ್ಲ. ಎದುರುದಾರನು ಅರ್ಜಿದಾರಳಿಗೆ ದಿನಾಂಕ 17-03-2020 ರಂದು ತನ್ನ ವಕೀಲರ ಮೂಲಕ ವೈವಾಹಿಕ ಜೀವನ ಸಾಗಿಸಲು ನೋಟಿಸ ನೀಡಿರುತ್ತಾನೆ ಎಂದರೆ ಸರಿ. ಸದರಿ ನೋಟಿಸ ನೀಡುವ ಪೂರ್ವದಲ್ಲಿ ದಿನಾಂಕ 27-11-2019 ರಂದು ಎದುರುದಾರನ ಜೊತೆಯನ್ನು ಬಿಟ್ಟು ಅರ್ಜಿದಾರಳು ತನ್ನ ತವರೂ ಮನೆಗೆ ಬಂದಿರುತ್ತಾಳೆ ಅಂದರೆ ಸರಿಯಲ್ಲ.

10) ಎದುರುದಾರನು ವಿವಾಹದಿಂದ ಇಲ್ಲಿಯವರೆಗೆ ಹಾಗೂ ಮುಂದೆಯು ಸಹ ಅರ್ಜಿದಾರಳ ಸಂಗಡ ವೈವಾಹಿಕ ಜೀವನ ಸಾಗಿಸಲು ಸಿದ್ಧನಿರುತ್ತಾನೆ ಎಂದರೆ ಸಾಕ್ಷಿಯು ಆತನು ಕಿರುಕುಳ ನೀಡುತ್ತಾನೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣವನ್ನು ಚಾಲ್ತಿಯಲ್ಲಿ ಇಟ್ಟು ಎದುರುದಾರನು ಅರ್ಜಿದಾರಳಿಗೆ ತನ್ನ ಸಂಗಡ ವೈವಾಹಿಕ ಜೀವನ ಸಾಗಿಸಲು ಕರೆದುಕೊಂಡು ಹೋಗಲು ಸಿದ್ಧನಿರುತ್ತಾನೆ ಎಂದರೆ ಕಳುಹಿಸಿ ಕೊಡುತ್ತೇವೆ.

11) ಅರ್ಜಿದಾರಳು ಎದುರುದಾರನ ಜೊತೆಯನ್ನು ತೆರೆದು ಹೋದ ಕಾರಣ ಎದುರುದಾರನ ಮಾನಸಿಕವಾಗಿ ಕುಗ್ಗಿರುತ್ತಾನೆ ಅಂದರೆ ಸರಿಯಲ್ಲ. ಅರ್ಜಿದಾರಳು ಶಿಕ್ಷಣವು ಎದುರುದಾರನ ಶಿಕ್ಷಣ ಕ್ಕಿಂತ ಹೆಚ್ಚು ಇದ್ದ ಕಾರಣ ಆಕೆಯು ಆತನನ್ನು ಕೀಳುಬಾವನೆಯ ಮೇಲೆ ನೋಡುತ್ತಾಳೆ ಅಂದರೆ ಸರಿಯಲ್ಲ. ಅರ್ಜಿದಾರಳು ಎದುರುದಾರನ ಜೊತೆಯನ್ನು ತೆರೆದು ಹೋದ ಕಾರಣ ಸದರಿ ವಿವಾಹದಿಂದ ಸಂತಾನ ಹುಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಪಕ್ಷಗಾರರು ಯವ್ವನದಲ್ಲಿ ಇರುತ್ತಾರೆ ಎಂದರೆ ಸರಿ.

12) ಎದುರುದಾರನಿಗೆ ಆರ್ಥಿಕವಾಗಿ ನಷ್ಟ ಮಾಡಬೇಕು ಮತ್ತು ಮಾನಸಿಕವಾಗಿ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಂಗತಿಗಳನ್ನು ಕಾಣಿಸಿ ಅರ್ಜಿಯನ್ನು ಸಲ್ಲಿಸಿ, ನಾನು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಎದುರುದಾರನು ಅರ್ಜಿದಾರಳಿಗೆ ಹೊಡಿ ಬಡಿ, ಉಪವಾಸ ಇಟ್ಟು ಕಿರುಕುಳ ನೀಡುತ್ತಿದ್ದ ಬಗ್ಗೆ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರಳಿಂದ ಹಣ ಪಡೆದುಕೊಂಡು ಬರಲು ಬೆದರಿಕೆ ಹಾಗೂ ಒತ್ತಾಯ ಮಾಡುತ್ತಿದ್ದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

13) ಎದುರುದಾರನು ಮಾನ್ಯ ನ್ಯಾಯಾಲಯದಿಂದ ವೈವಾಹಿಕ ಜೀವನವನ್ನು ಅರ್ಜಿದಾರಳು ಸಾಗಿಸಬೇಕೆಂದು ಆದೇಶ ಪಡೆದರು ಸಹ ಅರ್ಜಿದಾರಳು ನ್ಯಾಯಾಲಯದ

ಆದೇಶವನ್ನು ಪಾಲನೆ ಮಾಡದೇ ಸದರಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಅಂದರೆ ಸರಿಯಲ್ಲ.

14) ಸದರಿ ಪ್ರಕರಣದ ಅರ್ಜಿಯನ್ನು ಅರ್ಜಿದಾರಳು ತನ್ನ ಗಂಡನ ಮನೆಯನ್ನು ಬಿಟ್ಟು ತವರೂ ಮನೆಗೆ ಬಂದು 2020 ರಲ್ಲಿ ಸಲ್ಲಿಸಿರುತ್ತಾಳೆ ಎಂದರೆ ಸರಿ. ಸದರಿ ಪ್ರಕರಣ ದಾಖಲಾದ ನಂತರದಲ್ಲಿ ಅರ್ಜಿದಾರಳು ಎದುರುದಾರನ ಸಂಗಡ ಹೋಗಿರುತ್ತಾಳೆ. ಸಾಕ್ಷಿ ಮುಂದುವರೆದು ನ್ಯಾಯಾಲಯದ ಆದೇಶದ ಮೇರೆಗೆ ಹೋಗಿರುತ್ತಾಳೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತೇನೆ. ನ್ಯಾಯಾಲಯದ ಆದೇಶವಾದ ನಂತರ ಅರ್ಜಿದಾರಳು ಹೋಗಿರುತ್ತಾಳೆ ಎಂದು ಹೇಳಲು ನಾನು ಯಾವುದೇ ದಾಖಲೆ ನೋಡಿಲ್ಲ.

15) ಅರ್ಜಿದಾರಳ ಕುಟುಂಬಕ್ಕೆ ಮತ್ತು ನನ್ನ ನಡುವೆ ಒಳ್ಳೆಯ ಬಾಂದವ್ಯವಿದ್ದ ಕಾರಣ ಅವರಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**